

ಪ್ರೀತಿಸಿ, ಪ್ರೀತಿಸಿ ಆ ಉಸಿರನ್ನು ನನಗೆ ಕೊಟ್ಟವರಂತೆ ಕೊಟ್ಟು ಎದ್ದು ಹೋದರು. ತಿಂಗಳುಗಟ್ಟಲೆ ಆಸ್ಪತ್ರೆಯಲ್ಲಿ ನರಳಿ ಸತ್ತರು. ಇಂದೇಕೆ ಅವುಗಳಿಗೆ ಇಲ್ಲಿ ಜಾಗವಾಗುತ್ತಿಲ್ಲ? ಈ ಅಲಮಾರಿನಲ್ಲಿ ಏನೆಲ್ಲಾ ತುಂಬಿಕೊಂಡು ಬಿಟ್ಟಿವೆ. ಮೊದ ಮೊದಲು ಇವುಗಳನ್ನು ಇಟ್ಟಾಗ ಅಲಮಾರಿನ ತುಂಬಾ ಇವೇ ಕಾಣುತ್ತಿದ್ದವು. ಇಷ್ಟು ದಿನಗಳಲ್ಲಿ ದಿನೇ ದಿನೇ ಏನೇನೊ ಬಂದು ತುಂಬಿಕೊಳ್ಳತೊಡಗಿವೆ; ನನ್ನ ಮನಸಿನಂತೆ.

ಯಾವುದು ಉಳಿಸಲಿ; ಯಾವುದನ್ನು ತ್ಯಜಿಸಲಿ? 'ಯೆಸ್, ಬಂದು ಬಿಡು. ಯಾರೂ ಇಲ್ಲ. ಬೇಗ. ತಡ ಮಾಡ್ಬೇಡ', ಟೈಪ್ ಮಾಡಿಟ್ಟ ಮೆಸೇಜ್ ಅನ್ನು ಯಾಕೆ ನಾನು ಕಳುಹಿಸಲಿಲ್ಲ? ಯಾಕೆ ಈ ಬೆರಳುಗಳು ಕಳುಹಿಸಲು ಚೂರು ತಡೆದವು? ಈಗಲೂ ಕಳುಹಿಸಬೇಕು ಎನಿಸುತಿದೆ. ವಾರದಿಂದ ಅದೆಷ್ಟು ಬಾರಿ ಟೈಪ್ ಮಾಡಿ ಮಾಡಿ ಅಳಿಸಿದೆ ಆ ಸಾಲುಗಳನ್ನು. ಬೇಕು ಅನಿಸುವ ಸೊಗಸು, ಬೇಡ ಅನಿಸುವ ಮನಸು. ಯಾಕೆ ನನಗೆ ಹೀಗೆಲ್ಲಾ ಅನಿಸುತಿದೆ ಎಂಬುದು ನಿಜಕ್ಕೂ ಗೊತ್ತಿಲ್ಲ.

'ಈ ಜನರ ನಡುವೆ ಒಂದು ಕಲೆಯೂ ಹತ್ತದೆ ಬದುಕೋದು ಅಂದ್ರೆ ಸುಮ್ನೇನಾ? ಅದೂ ಒಂಟಿ ಹೆಣ್ಣು.. ನೋಡು ಪಾಪ ಇವಳೆಷ್ಟು ಹಲ್ಲುಕಚ್ಚಿ ಬದುಕುತ್ತಿದ್ದಾಳೆ. ಒಂದು ಕಲೆಯೂ ಇಲ್ಲದೆ ಈ ಜನ ಹೀಗೆ ಯಾಕೆ ಮಾತಾಡಿಕೊಳ್ಳಬೇಕು. ಈ ದರಿದ್ರ ಜನಕ್ಕೆ ಏನಾಗಿದೆ? ನನಗೊಂದು ಕಲೆಯನ್ನು ಯಾಕೆ ಅಂಟಿಸಲಿಲ್ಲ? ಯಾಕೆ ಹಿಂದೆ ಮುಂದೆ ಮಾತಾಡಿಕೊಳ್ಳಲಿಲ್ಲ ಇವರು? ದಾರಿಯಲ್ಲಿ ನಿಂತಾಗ ಯಾರಿಗೆ ಕಾಯ್ತಾ ಇದೀಯ ಅನ್ನಲಿಲ್ಲ? ಮೊಬೈಲ್ ತುಂಬಾ ಹೊತ್ತು ಹಿಡಿದಾಗ ಯಾರೊಂದಿಗೆ ಅಷ್ಟು ಮಾತು ಅನ್ನಲಿಲ್ಲ, ಸಾಧ್ಯನೇ ಇಲ್ಲ ಒಂದು ಹೆಣ್ಣು ಯಾರ ಸಂಗವೂ ಇಲ್ಲದೆ ಇಷ್ಟು ವರ್ಷ ಒಂಟಿಯಾಗಿರಲು. ಇದೆಲ್ಲಾ ಹೇಗೆ ಸಾಧ್ಯ? ಅನ್ನಲಿಲ್ಲ. ಅವಳ ಲೈಫ್‌ನಲ್ಲಿ ಯಾರೊ ಇರಬಹುದು ಅಂತ ಯಾಕೆ ಮಾತನಾಡಿಕೊಳ್ಳಲಿಲ್ಲ ಇವರು? ಈ ನನ್ನ ಮಗಳು ಯಾಕಮ್ಮ ನೈಟ್ ಯಾವಾಗಲೂ ಇಷ್ಟು ಲೇಟಾಗಿ ಮಲಗ್ತಿ ಅಂತ ಸಣ್ಣ ಅನುಮಾನವನ್ನೂ ತೋರಿಸಲಿಲ್ಲ... ಛೇ ಇವರಿಗೆಲ್ಲಾ ಏನಾಗಿದೆ?

ಆದರೆ ನಾನು? ನಾನು ನಂಬಿಸಲಿಲ್ಲ; ಜಗತ್ತು ನಂಬಿತು. ನನ್ನ ಗಂಡ ಒಳ್ಳೆಯವನು, ಅವರ ಹೆಂಡತಿಯಾದ ನಾನು ಒಳ್ಳೆಯವಳು ಅನ್ನುತ್ತಾರೆ ಜನ. ಈ ಒಳ್ಳೆಯತನದೊಂದಿಗೆ ಬದುಕು ಸಾಗಿಸುವುದು ಎಷ್ಟೊಂದು ಕಷ್ಟ ಎಂಬುದು ಇವರಿಗೆ ಯಾಕೆ ಅರ್ಥವಾಗುತ್ತಿಲ್ಲ. ನಾನು ಜನರಿಗೆ 'ತಾನು ಒಳ್ಳೆಯವಳು' ಎಂದು ನಂಬಿಸಿದೆನಾ? ಇದು ನಿಜನಾ? ನನಗೆ ನಾನೇ ಸುಳ್ಳು ಹೇಳಿಕೊಳ್ಳುತ್ತಿದ್ದೇನಾ? ಸಾಮಾನ್ಯ ಜನರಿಗೆ ಸಾಮಾನ್ಯತೆಯೇ ಸಾಕು. ಅಸಾಮಾನ್ಯತೆಯನ್ನು ಹೊರುವ ಶಕ್ತಿ ಇರಲ್ಲ. ಇವರೆಲ್ಲರೂ ಮೊದಲೇ ನನ್ನ ಬಗ್ಗೆ ಏನಾದ್ರೂ ಆಡಿಕೊಂಡಿದ್ದರೆ ನಾನು ಎಲ್ಲರಂತೆ ಯಾರದೊ ಜೊತೆ ಓಡಾಡಿಕೊಂಡು ಇರಬಹುದಿತ್ತು. ಜನ ನನ್ನನ್ನು ಕೇಳದೆ ನನ್ನನ್ನು ಒಳ್ಳೆಯವಳನ್ನಾಗಿ ಮಾಡಿದರು. ಆದರೆ ಒಳ್ಳೆಯದರಲ್ಲಿ ಬದುಕುವುದು ಕಷ್ಟ. ಅವನು ಇಷ್ಟ ಆದ. ಯಾಕೆ ಆಗಬಾರದಾ? ಅವನಿಗೆ ನನ್ನನ್ನು ಮುಕ್ಕುವ ಉದ್ದೇಶವಾ? ಇರಬಹುದು. ಅವನು ನನ್ನನ್ನು ಮುಕ್ಕಲಿ ಎಂಬ ಆಸೆ ನನಗೂ ಇದೆಯಾ? ಇರಬಹುದು. ಹೌದು ಇರಬಾರದು ಯಾಕೆ? ಎಲ್ಲರದೂ ಒಂದು ಉದ್ದೇಶವೇ ಇರುತ್ತದೆ. ನನ್ನಲ್ಲೂ ಇದೆ. ನನ್ನಲ್ಲಿ ಇರದಿದ್ದರೆ ಯಾಕಾದರೂ ನಾನು ಅವನನ್ನು ಹತ್ತಿರ ಬಿಟ್ಟುಕೊಳ್ಳುತ್ತಿದ್ದೆ. ಈ ಜನರ ಎಲ್ಲಾ ಸಂಬಂಧಗಳು ಒಂದು ಉದ್ದೇಶದವು. ಉದ್ದೇಶ ಸತ್ತ ದಿನ, ಸಂಬಂಧವೂ ಸಾಯುತ್ತದೆ. ಜನ ಅದನ್ನು ಮೋಸ ಅಂತ ವ್ಯಾಖ್ಯಾನಿಸುತ್ತಾರೆ.

ಇಷ್ಟು ದಿನ ಅವರ ನೆನಪು ತಡೆದವು. ಈಗ ಯಾಕೆ ತಡೆಯುತ್ತಿಲ್ಲ. ಮನುಷ್ಯರಾದರೂ, ನೆನಪುಗಳಾದರೂ ನಮ್ಮ ಜೊತೆ ಎಷ್ಟು ದಿನ ಉಳಿದಾವು? ಅವನು ಮನಸಿಗೆ ಬಂದು ಎಷ್ಟು ದಿನವಾಗಿದೆ. ಕೆನ್ನೆಯ ಮೇಲೆ ಅವನ ತುಟಿಗಳು ಮೂಡಿ ಎಷ್ಟೂ ದಿನವಾಗಿದೆ. ಈಗ ಅವನು ದೇಹದ ಮೇಲೆ ಮೂಡಿ ಬರಬೇಕು. ಅವನದು ಬಲವಂತವಿಲ್ಲ. ನನ್ನದೂ ಇಲ್ಲ. ಎಂದಾದರೂ ಹೀಗೆ ಅಕಸ್ಮಾತ್ ನಡೆಯಬಹುದು ಅನಿಸುತ್ತೆ. ಅದು ನಡೆಯಲೇ? ನಡೆಯಬಾರದ? ಎರಡಕ್ಕೂ ಕಾರಣವಿದೆ. ಈ ಕ್ಷಣಕ್ಕೆ ಎರಡೂ ಸರಿ. ಅದರಿಂದಲೇ ಮೆಸೇಜ್ ಸೆಂಡ್ ಆಗೋದು ತಡೆದುಕೊಂಡಿತಾ? ಮಗಳಿಗಾಗಿ ತಡೆದೆನಾ? ಅವಳು ಅದೆಷ್ಟು ಬಾರಿ ಹೇಳಿದಳು.

ಪ್ಲೀಸ್ ಮಮ್ಮಿ ಇನ್ನೊಂದು ಮದುವೆ ಆಗು ಅಂತ. ಆಗಬಹುದಿತ್ತು... ಆದರೆ ಆಗಲಿಲ್ಲ. ನೋಡಿ ಅದಕ್ಕೂ ಕಾರಣ ಇದೆ. ಸಮಾಜ ಹೊರಿಸಿದ ಒಳ್ಳೆತನದ ಆರೋಪ. ಒಳ್ಳೆಯವರು ಇನ್ನೊಂದು ಮದುವೆ ಆಗುವುದಿಲ್ಲ. ಟೈಪ್ ಮಾಡಿ ಉಳಿಸಿಕೊಂಡ ಆ ಮೆಸೇಜ್ ಅನ್ನು ನಾಳೆ ಅವನಿಗೆ ಕಳುಹಿಸಿ ಬಿಡಬೇಕು.

'ಮನೆಯಲ್ಲಿ ಯಾರೂ ಇರುವುದಿಲ್ಲ. ಈಗೀಗ ಮನಸಿನಲ್ಲೂ ಯಾರೂ ಇಲ್ಲ. ನುಸುಳುವೆಯೊ ನುಗ್ಗುವೆಯೊ ಆಯ್ಕೆ ನಿನ್ನದು' ಎನ್ನುವ ಈ ಸಾಲುಗಳನ್ನು ಅವನಿಗೆ ಕಳುಹಿಸಿ ಬಿಡಬೇಕು. ಆದರೆ ಇದೇ ಲಹರಿ, ಇದೇ ಮನಸು ನಾಳೆ ಇರುತ್ತದಾ? ಅದನ್ನು ನಾಳೆ ಎಂಬುದು ನಿರ್ಧರಿಸಬಹುದು. ಆದರೂ ಅಮ್ಮ ಒಳ್ಳೆಯವಳಲ್ಲ ಎಂಬುದು ಮಗಳಿಗೆ ತಿಳಿಯಬೇಕು. ಮಗಳ ಕಣ್ಣಿನಾಳದ 'ನಮ್ಮ ಅಮ್ಮ ತುಂಬಾ ಒಳ್ಳೆಯವರು' ಅನ್ನುವ ತೀರ್ಪನ್ನು ನಾನು ಹೇಗೆ ಓದಲಿ...? ಒಳ್ಳೆಯದು ಎಂಬುದು ತುಂಬಾ ಅಪಾಯಕಾರಿ. ನಾಳೆ ಖಂಡಿತ ಮಗಳೆದುರಿಗೆ ನಿಲ್ಲುತ್ತೇನೆ. ಡೈರಿ ಮುಗಿಯುತ್ತದೆ.

2

ಅತ್ತ ಆ ಪಕ್ಕದ ರೂಮಿನಲ್ಲಿ ಅವಳು. ರೂಮಿನಲ್ಲಿ ಉರಿಯುತ್ತಿರುವ ಮಿಣ ಮಿಣ ಬೆಳಕು. ಗಾಢ ನೀಲಿ. ಅವಳ ಅರ್ಧತೊಡೆಯನ್ನು ಮಾತ್ರ ಮುಚ್ಚಿದೆ ಚಡ್ಡಿ. ಅದರ ಮೇಲೆ ಹೂವುಗಳಿವೆ. ಅವು ನಗುತ್ತಿವೆ ಆದರೆ ಅವಳು ಮಾತ್ರ ದ್ವಂದ್ವದಲ್ಲಿದ್ದಾಳೆ. ಕಿಟಕಿಯಿಂದ ತಪ್ಪಿಸಿಕೊಂಡು ಹೋಗುತ್ತಿರುವ ಬೆಳಕನ್ನು ಕರ್ಟನ್‌ಗಳು ಅಡ್ಡಗಾಲು ಹಾಕಿ ತಡೆಯುತ್ತಿವೆ. ಅವಳು ಮಗಳು. ಎದೆ ತುಂಬಿಕೊಂಡಿರುವ ಮಗಳು. ಇತ್ತ ಈ ರೂಮಿನಲ್ಲಿ ಕನಲುತ್ತಾ ಕೂತಿರುವ ಹೆಂಗಸಿನ ಮಗಳು. ಅಲ್ಲಿದ್ದಾಳೆ ಅವಳ ಮಗಳು; ಒಂದು ಚಡಪಡಿಕೆಯೊಳಗೆ ಬಿದ್ದು ಈಜುತ್ತಾ. ಇನಿಯನ ಬೆನ್ನು ಸವರುವ ಹುಕಿಯಲ್ಲಿ ತೊಳಲುತ್ತಾ.. ನಿದ್ದೆ ಬರಲಿಲ್ಲ ಅವಳಿಗೆ... ಮೂರ್ನಾಲ್ಕು ಬಾರಿ ಹೊರಳಾಡಿದಳು.

ಮತ್ತೆ ಮೊಬೈಲ್ ನೋಡಿದಳು. ಅವನು ಆಫ್‌ಲೈನ್. ನಿದ್ದೆ ಸುಳಿಯುತ್ತಿಲ್ಲ. ರಾತ್ರಿ ಎಂಬುದು ಅತೀ ಸಾವಧಾನವಾಗಿ ಉಸಿರಾಡುತ್ತಿತ್ತು. ಆದರೆ ಈಕೆ ಮಾತ್ರ ಬಿಸಿಯಾಗತೊಡಗಿದ್ದಳು. ಅವನ ನೆನಪು, ಅಮ್ಮನ ಬದುಕು... ಎರಡರ ಮಧ್ಯೆ ಇಷ್ಟಿಷ್ಟೆ ನವೆಯುತ್ತಿದ್ದಳು.

ಎದ್ದು ಕೂತಳು. ಹೋಗಿ ಉದ್ದದ್ದ ನಿಲುವುಗನ್ನಡಿ ಮುಂದೆ ನಿಂತಳು. ಅವಳಿಗೆ ಅವಳೇ ಎದುರಾಗುವ ಹಂಬಲ. ಹೀಗೆ ಅವಳಿಗೆ ಅವಳೇ ಎದುರಾದಾಗ